ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಶ್ರೀಕೃಷ್ಣನಿಗೆ ಬೆಣ್ಣೆಯನ್ನು ಬಿಟ್ಟು ಮತ್ತೇನನ್ನು ಕದಿಯಕ್ಕೆ ಬರುತ್ತೆ?*



ಕೋಟ್ಯಂತರ ಭಕ್ತರ ಮನಸ್ಸನ್ನು.

ಪಿ. ಚಿದಾನಂದ, ಜವಗೊಂಡನಹಳ್ಳಿ

*ಕನ್ನಡಿಗರಿಗೆ ಕರ್ನಾಟಕದಲ್ಲಿ ಕೆಲಸ ಸಿಗುವುದು ತುಂಬಾ ಕಡಿಮೆ. ಕಾರಣವೇನಿರಬಹುದು?*

ಹೆಚ್ಚಿನ ಕನ್ನಡಿಗರು ಬಾಸ್ ಆಗದೆ 'ಎಸ್ ಬಾಸ್'ಗಳು ಆಗಿರುವುದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಒಬ್ಬಳಿದ್ದರೆ ಹೆಂಡತಿ; ಇನ್ನೊಬ್ಬಳಿದ್ದರೆ ಸವತಿ; ಮತ್ತೊಬ್ಬಳಿದ್ದರೆ?*

ರಾಮಾಯಣ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಹೃದಯ ಬಡಿತಕ್ಕೂ, ಡೊಳ್ಳು ಬಡಿತಕ್ಕೂ ಏನು ವ್ಯತ್ಯಾಸ?*

ಕೆಲವು ಪಂಗಡಗಳಲ್ಲಿ ಹೃದಯದ ಬಡಿತ ನಿಂತಾಗ ಡೊಳ್ಳು ಬಡಿತ ಆರಂಭ.

ವಿ.ಎಂ. ಮೇಗೂರ, ಧಾರವಾಡ

*ಸುಧಾದ ಸಂಕೇತವಾಗಿ ನಂದಿಯನ್ನು ಬಳಸಿರುವ ರಹಸ್ಯ?*



ಓದುಗಶಿವನ ಸೇವೆಗೆ 'ಸುಧಾ' ಸದಾ ಸಿದ್ಧ ಎಂದು ಸೂಚಿಸಲು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

*ಇಲ್ಲೊಬ್ಬ ನಿವೃತ್ತರು ಭೇಟಿಯಾದಾಗಲೆಲ್ಲ 'ನಿಷ್ಪ್ರಯೋಜಕ, ಗೊತ್ತುಗುರಿಯಿಲ್ಲದ ಜೀವನ' ಎನ್ನುವರಲ್ಲಾ...?*

ಆಗಷ್ಟೇ ಟಿವಿ ಆಫ್ ಮಾಡಿ ಬಂದಿರುತ್ತಾರಂತೆ; ಬ್ರೇಕಿಂಗ್ ನ್ಯೂಸಿಗರ ಜೀವನದ ಬಗ್ಗೆ ಆ ಮಾತು.

ಜಿ.ಸ.ನಾ. ಶೆಟ್ಟಿ, ಹೊಸಪೇಟೆ

*ರಾಜಪ್ರಭುತ್ವ; ಬ್ರಿಟಿಷ್ ಪ್ರಭುತ್ವ; ನಂತರ ಪ್ರಜಾಪ್ರಭುತ್ವ. ಈಗ ಕೋಟ್ಯಧಿಪತಿಗಳ ಪ್ರಭುತ್ವ. ಮುಂದೆ?*

ಕೋಟ್ಯಧಿಪತಿಗಳ ಮಕ್ಕಳ ಪ್ರಭುತ್ವ! ಭಾರತದಲ್ಲಿ ಪ್ರಜಾಪ್ರಭುತ್ವ ಒಂದು ಭವ್ಯವಾದ ಸುಳ್ಳು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪರೀಕ್ಷೆಗೂ, ವಧು ಪರೀಕ್ಷೆಗೂ ವ್ಯತ್ಯಾಸವೇನು?*

ಪಾಸ್ ಆಗಲು ಒಂದರಲ್ಲಿ ಮಾರ್ಕ್ಸ್ ಸರಿಯಿರಬೇಕು; ಇನ್ನೊಂದರಲ್ಲಿ ರಿಮಾರ್ಕ್ಸ್ ಸರಿಯಿರಬೇಕು.

ಮುಕುಂದ ಹೆರಕಲ್ಲ, ಕಲಬುರ್ಗಿ

*ಗಿಡ್ಡ ಹೆಂಡತಿ ಲೇಸು ಎಂದು ಸರ್ವಜ್ಞ ಕವಿ ಹೇಳಬೇಕಾದರೆ ಅವನ ಮನದ ಇಂಗಿತವೇನಿರಬಹುದು?*

ದಡ್ಡ ಗಂಡ ಆಗಾಗ್ಗೆ ತಲೆಯಮೇಲೆ ಮೊಟಕಿಸಿಕೊಂಡರೆ ಹೆಡ್ ಇಂಜ್ಯುರಿ ಆದೀತೆಂಬ ಕಾಳಜಿ.

ಬಿ. ಬೋರೇಗೌಡ, ಸರಸ್ವತಿಪುರ

*ಧರ್ಮಸ್ಥಳದ ಮಂಜುನಾಥನ ಜಾಗದಲ್ಲಿ ಮ್ಯಾಚ್ ಫಿಕ್ಸಿಂಗ್ ಇದೆ ಅನ್ನುತ್ತಾರೆ ನಿಜವಾ ಗುರುವೆ?*

ಅಕ್ಷರಶಃ ನಿಜ. ಮ್ಯಾಚ್ ಆಗಿರುವ ವಧು–ವರರು ಸತಿಪತಿಯಾಗಿ ಫಿಕ್ಸ್ ಆಗಲು ಅದೇ ಪ್ರಶಸ್ತ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ಈ ಬಾರಿ ನೀವು ಮುಖ್ಯಮಂತ್ರಿಯಾದರೆ?*

ಏಕೀ ದುಃಸ್ವಪ್ನ? ನನ್ನಲ್ಲಿ ಅಷ್ಟು ಭಂಡತನವಿದೆ ಎಂದು ನಿಮಗನಿಸಿದೆಯೇ? ಅಕಟಕಟಾ!

ವೀಣಾ ರವಿ ಪೈ, ಕಾಸರಕೋಡ

*ಭಾರತೀಯರು ವಿದೇಶಿ ಸಂಸ್ಕೃತಿಗೆ ಮಾರು ಹೋಗುವುದೇಕೆ?*

ಚಂದಕ್ಕಿಂತ ಸ್ವಚ್ಛಂದಕ್ಕೆ ಮನ ಸುಲಭವಾಗಿ ಮಾರು ಹೋಗುವುದರಿಂದ.

ಎ. ಕೃಷ್ಣಾನಂದ ರೆಡ್ಡಿ, ಮುಳ್ಳಿ

*ಹೆಣ್ಣೆಂದರೆ ಮಾಯೆ. ಗಂಡು ಎಂದರೆ...?*

ಲಗ್ನವಾಗುವುವರೆಗೆ 'ಮಾ' ಎನ್ನುವ, ನಂತರ ಸತಿಯಿಂದ 'ಯೇ(ಏಯ್)' ಎನ್ನಿಸಿಕೊಳ್ಳುವ ಮಾಯೇ!

## ಬಹುಮಾನಿತ ಪ್ರಶ್ನೆ

ಸವಿತಾಕುಮಾರಿ ಕೆ, ಬೆಂಗಳೂರು

*ವಾರಭವಿಷ್ಯ ಸುಳ್ಳೆಂದು ತಿಳಿದಿದ್ದರೂ ನಾವೇಕೆ ಮೊದಲು ಅದನ್ನೇ ಓದುತ್ತೇವೆ ಸರ್?*

ಆರ್‌ಸಿಬಿ ಸೋಲುತ್ತದೆಂದು ತಿಳಿದೂ ಮ್ಯಾಚ್ ನೋಡುತ್ತೇವಲ್ಲ, ಹಾಗೆಯೇ ಇದೂ ಒಂದು ಚಟ.

ಬಾ.ರಂ. ಸುರೇಶ, ಶಿವಮೊಗ್ಗ

*ಕನಸಿನಲ್ಲಿ ಬಂದು ಪ್ರೀತಿಸುವವಳು ನಿಜವಾಗಿ ಎದುರು ಬಂದು ನಿಂತರೆ ಏನು ಮಾಡುವುದು ಶಿವಾ?*

ಕರವನ್ನು ಮುಂಚಾಚಿ; ಅವಳೂ ಕರ ಚಾಚಿದರೆ ಜೋಡಿ; ಕೆರ ಚಾಚಿದರೆ ಓಡಿ.

ಪ್ಲೇಟೊ ಪ್ರಕಾಶ್, ಹೊಸನಗರ

*ಮೊಬೈಲ್ ಇಲ್ಲದಿದ್ದರೆ ಹುಡುಗಿಯರ ಪರಿಸ್ಥಿತಿ?*



ಅವರೇನೋ ಕನ್ನಡಿ ನೋಡುತ್ತಾ ಕುಳಿತಾರು. ಅವರಿಂದ ಮೆಸೇಜ್ ಬರದ ಹುಡುಗರದೇ ಅಧೋಗತಿ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ನೇತ್ರದಾನ ಮಾಡಿರಿ, ದೇಹದಾನ ಮಾಡಿರಿ ಎನ್ನುವ ಸ್ವಾಮಿಗಳು ಅವರೇಕೆ ದಾನ ಮಾಡುವುದಿಲ್ಲ?*

ನಮ್ಮದು ಅವರ, ಎಂದರೆ ಪುಣ್ಯದ, ಸಂಪರ್ಕ; ಅವರದು ನಮ್ಮ, ಎಂದರೆ ಪಾಪದ ಸಂಪರ್ಕ. ದಾನಕ್ಕೆ ನಮ್ಮದೇ ಶ್ರೇಷ್ಠ!

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

*ಸಿನಿಮಾದಲ್ಲಿ ಹೀರೋ- ಹೀರೋಯಿನ್ ಮದುವೆಯಾಗಿ ನಿಜಜೀವನದಲ್ಲೂ ಮುಂದುವರಿದರೆ ನಿರ್ಮಾಪಕರೇನು ಮಾಡುವರು?*

ಸಿನಿಮಾ ನಿಲ್ಲಿಸಿ, ಸೀರಿಯಲ್ ಆರಂಭಿಸಿ, ಇಡೀ ಗೋಳನ್ನು ಹಂತಹಂತವಾಗಿ ತೋರಿಸುವರು.

■ ರಾಮ್